

## ಆಮ್ಲಜನಕ

ತಂಗಿಯ ಮಗ ಎಂಟು ವರ್ಷದ ಪುಟ್ಟು ವಿಜ್ಞಾನ ಪುಸ್ತಕ ಹಿಡಿದು ಬೇರೆ ಎಲ್ಲೋ ನೋಡುತ್ತ ಕುಳಿತಿದ್ದ. 'ಯಾಕೊ ಮರಿ? ಏನೊ ಚಿಂತೆ ಮಾಡ್ತಾ ಇದ್ದೀಯಲ್ಲ?' ಅಂತ ಕೇಳಿದೆ. ನಾಲ್ಕು ಶತಮಾನಗಳ ಹಿಂದೆ ಜನ ಆಮ್ಲಜನಕ ಇಲ್ಲದೆ ಹ್ಯಾಗೆ ಬದುಕ್ತಾ ಇದ್ರು ಅಂತ ಆಲೋಚನೆ ಆಗ್ತಿದೆ ದೊಡ್ಡಮ್ಮ. ಸದ್ಯ, ಆಗ ನಾನು ಹುಟ್ಟಿರಲಿಲ್ಲವಲ್ಲ... ಒಳ್ಳೇದಾಯ್ತು...' ಎಂದ. 'ನಾಲ್ಕು ಶತಮಾನಗಳ ಹಿಂದೆ ಆಮ್ಲಜನಕ ಇರಲಿಲ್ಲ ಅಂತ ಯಾರೊ ಹೇಳಿದ್ದು ನಿನಗೆ?' ಕೇಳಿದೆ. 'ನಿನ್ನೆ ಕ್ಲಾಸಲ್ಲಿ ಟೀಚರ್ ಹೇಳಿದ್ರು ದೊಡ್ಡಮ್ಮ, ನಾವು ಬದುಕಬೇಕಾದರೆ ಆಮ್ಲಜನಕ ತುಂಬಾ ಮುಖ್ಯ. ಇದನ್ನು ನಾಲ್ಕು ಶತಮಾನಗಳ ಹಿಂದೆ ಕಂಡುಹಿಡಿಯಲಾಯಿತು ಅಂತ...' ಎಂದು ಹೇಳಿದಾಗ ನಾನು ತಬ್ಬಿಬ್ಬು.

**ಜ್ಯೋತಿ ಪರಬತ್**

## 'ಎಮ್ಮಿ ಗಬ್ಬ ಆಗಿಲ್ರೀ'

ನಾನು ಗ್ರಾಮೀಣ ಬ್ಯಾಂಕ್ ಸೇರಿದ ಹೊಸದು. ಆಗ ಕೃಷಿ ಸಂಬಂಧಿ ಸಾಲಗಳನ್ನು ಹೆಚ್ಚಾಗಿ ಕೊಡುತ್ತಿದ್ದರು. ಐಆರ್‌ಡಿಪಿ ಯೋಜನೆಯಲ್ಲಿ ಎಮ್ಮೆಗಳನ್ನು ಕೊಡಿಸಬೇಕಾಗುತ್ತಿತ್ತು. ಒಂದು ದಿನ ಬ್ಯಾಂಕಿಗೆ ಬಂದ ಒಬ್ಬ ಹೆಣ್ಣುಮಗಳಿಗೆ ನಮ್ಮ ಮ್ಯಾನೇಜರ್ ಸಾಹೇಬರು, 'ಏನವಾss ನಿನ್ನ ಎಮ್ಮಿ ಸಾಲದ ಕಂತ ತುಂಬಲಿಲ್ಲಲಾ' ಎಂದರು. ಆಗ ಅವಳು ಥಟ್ಟನೆ, 'ಏನ ಮಾಡುದ್ರಿ ಸಾಹೇಬ್ರ, ನೀವ ಕೊಡಸಿದ ಎಮ್ಮಿ ಇನ್ನ ಗಬ್ಬss ಆಗಿಲ್ರೀ' ಎಂದಾಗ, ನಮ್ಮ ಮ್ಯಾನೇಜರ್ ಮುಖ ನೋಡಿ ನಾವೆಲ್ಲ ಬಿದ್ದು ಬಿದ್ದು ನಕ್ಕಿದ್ದೆವು.

**ರವಿ ಮುನವಳ್ಳಿ**



ಕಲೆ: ಗಣೇಶ ಆಚಾರ್ಯ